

ಕುಸುಮ ಆಗಿನ್ನೂ ಎಸ್ಸೆಸ್ಸೆಲ್ಸಿ ಓದುತ್ತಿದ್ದ ಹುಡುಗಿಯಾಗಿದ್ದರೂ ಅವಳಿಗೂ ಇಂತಾದ್ದೇನೋ ಅನಿಸುತ್ತಿತ್ತು. ಎಂಜಿನಿಯರಿಂಗ್ ಓದಲು ತುದಿಗಾಲಿನಲ್ಲಿ ನಿಂತಿದ್ದ ಕರುಣಾಕರ. ಮೆರಿಟ್ ಸೀಟು ಸಿಕ್ಕುವುದರಲ್ಲಿ ಅನುಮಾನ ಇರಲಿಲ್ಲ. ಭಾರೀ ಬುದ್ಧಿವಂತ ಅಲ್ಲದಿದ್ದರೂ ಹಳ್ಳಿ ಸ್ಕೂಲಿನಲ್ಲಿ ಓದಿದ ಮೀಸಲಾತಿ ಇತ್ತು. ಎಂಜಿನಿಯರಿಂಗ್‌ಗೆ ಸೇರ್ತೀನಿ ಅಂದರೆ ಹಿರಿಯಪ್ಪ ಕೈಯಾಡಿಸಿಬಿಟ್ಟಿದ್ದ.

'ಮನೆಬಾಗ್ಲಲ್ಲಿ ಅನ್ನೋ ಹಾಗೆ ಡಿಪ್ಲೊಮಾ ಕಾಲೇಜಿದೆ. ದಿನಾ ಒಂದೊಂದು ಗಂಟೆ ಬಸ್ಸಲ್ಲಿ ಓಡಾಡೋಕೆ ಹುಡುಗಣ್ಣಗಳಿಗೆ ಕಷ್ಟಾನಾ? ಮನೆ ಬಿಟ್ಟು ದೂರ ಹೋಗಿ ಹಾಸ್ಟೆಲ್‌ನಲ್ಲಿರೋದು ಅಂದ್ರೆ ಎಂತೆಂತಾ ಹುಡುಗರ ಸಾವಾಸ ಆಗುತ್ತೋ ಯಾರಿಗ್ಗೊತ್ತು? ಸ್ವಲ್ಪ ಅರ್ಥ ಮಾಡ್ಕೋ, ನಾನು ಹೇಳೋದೆಲ್ಲಾ ನಿನ್ನ ಒಳ್ಳೇದಕ್ಕೇ'

ಕಣ್ಣೆದುರು ಓಡಾಡಿಕೊಂಡಿರುವ ಹುಡುಗ ಮನೆ ಬಿಟ್ಟು ಕಣ್ಣಿಗೆ ಕಾಣದ ಊರಿಗೆ ಹೋಗುವುದು ಕಮಲಾಕ್ಷಿಗೂ ಸಮ್ಮತವೇನಲ್ಲ. ಪೇಟೆ, ಪಟ್ಟಣ ಅಂದರೆ ಅವಳಿಗೆ ಏನೋ ದಿಗಿಲು. ಸಾಯಬಾರದ ವಯಸ್ಸಿನಲ್ಲಿ ಗಂಡ ತೀರಿಕೊಂಡಿದ್ದು ಅವಳ ಎದೆಯಲ್ಲಿ ಯಾವುದೋ ತೀರದ ಭಯವನ್ನು ಹುಟ್ಟು ಹಾಕಿಬಿಟ್ಟಿತ್ತು. ಸುಕಾಸುಮ್ಮನೆ ಹೆದರಿಕೆ. ಮಕ್ಕಳು ಮನೆಗೆ ಬರುವುದು ಅರ್ಧ ಗಂಟೆ ಹೆಚ್ಚುಕಮ್ಮಿಯಾದರೆ ಏರಿಬಿಡುತ್ತಿತ್ತು ಎದೆಬಡಿತ. ಕೈಕಾಲು ನಡುಕ. ಒಂದೊಮ್ಮೆ ಬಾವ ತನ್ನ ಮಗನನ್ನು ಮನೆಯಿಂದಾಚೆ ಓದಲು ಕಳಿಸಲು ಒಪ್ಪಿಕೊಂಡಿದ್ದರೆ ಹೆದಹೆದರಿಯೇ ಬದುಕುವ ಪರಿಸ್ಥಿತಿ ತಂದುಕೊಳ್ಳುತ್ತಿದ್ದಳೇನೋ ಕಮಲಾಕ್ಷಿ. ಓದು ಇಲ್ಲೇ... ಎಂದು ಬಾವ ಖಡಕ್ಕಾಗಿ ಹೇಳಿದ್ದು ಅವಳಿಗೆ ಖುಷಿಯೇ ಆಗಿತ್ತು. 'ಸಾಯೋವರೆಗೆ ಇಲ್ಲೇ ಗೂಟ ಹೊಡ್ಕಂಡು ಕೂತಿರ್ಬೇಕಾ ನಾನು? ನಂಗಿಂತಾ ಕಮ್ಮಿ ನಂಬರ್ ಬಂದೋರೆಲ್ಲಾ ಸಿಟಿಗೆ ಹೋಗಿ ಕಾಲೇಜಿಗೆ ಸೇರ್ಕೋತಿದಾರೆ. ನಾಳೆ ನನಗಿಂತಾ ಒಳ್ಳೆ ಕೆಲಸಕ್ಕೆ ಸೇರಿ ಗಮ್ಮತ್ತಾಗಿರ್ತಾರೆ. ಹಿರಿಯಪ್ಪನಿಗೆ ಹೇಳು ನೀನು. ಅವನು ಹೇಳಿದ್ದಕ್ಕೆಲ್ಲಾ ತಾಳ ಹಾಕ್ಬೇಡ..' ಮಗ ಅಮ್ಮನನ್ನು ವಕಾಲತ್ತು ವಹಿಸಲು ಕೇಳಿಕೊಂಡಿದ್ದ. ಕಮಲಾಕ್ಷಿಯ ತಲೆ ಓಡುತ್ತಿದ್ದ ದಿಕ್ಕೇ ಬೇರೆ.

'ವಂಶಕ್ಕೆ ಒಬ್ಬನೇ ಗಂಡು ಮಗ ನೀನು. ಹುಡುಗೀರು ಮದುವೆ ಮಾಡ್ಕಂಡು ಗಂಡನ ಹಿಂದೆ ಹಾರ್ತಾರೆ. ನಾಳೆ ಈ ಜಮೀನು, ಮನೆ ನೋಡ್ಕೋಬೇಕಾದೋನು ನೀನೇ ಅಲ್ವಾ? ಏನೋ ಆಸೆಪಡ್ತಿದ್ದಿ ಅಂತ ಒಂದು ಡಿಗ್ರಿ ಮಾಡ್ಕಂಡ್ರೆ ಸೈಯಪ್ಪಾ. ಕೆಲಸಕ್ಕೆ ಸೇರ್ಲೇಬೇಕೂಂತ ರೂಲ್ಸು ಉಂಟಾ?'

'ನಿನ್ನ ಒಳ್ಳೇದಕ್ಕೇ ಹೇಳ್ತಿರೋದು...' ಮಗ ಕಹಿಯಾಗಿ ಅಮ್ಮನ ಮಾತನ್ನು ಪೂರ್ಣಗೊಳಿಸಿದ್ದ.

'ಹೂಂ ಮತ್ತೆ, ಸುಳ್ಳಾ?' ಅಂದಿದ್ದಳು ಕಮಲಾಕ್ಷಿ.

'ಈಗ ಹೆಣ್ಣುಮಕ್ಕಳಿಗೂ ಆಸ್ತೀಲಿ ಪಾಲುಂಟು ಅಮ್ಮಾ. ನಾಳೆ ಇರೋ ಆಸ್ತಿ ನಾಲ್ಕು ಪಾಲಾದ್ರೆ ನಂಗೇನು ಸಿಗುತ್ತೆ ಗೊರಟು? ಅತ್ಲಾಗಿ ಒಳ್ಳೇ ಕೆಲಸಾನೂ ಇಲ್ದೆ ಇತ್ಲಾಗಿ ಆಸ್ತೀಲೂ ನಾಮ...'

'ಹೌದ್ವಾದು. ಹುಡುಗೀರಿಗೆ ಚಿನ್ನ ಬಣ್ಣ ಹಾಕಿ ಧಾಂಧೂಂ ಆಗಿ ಮದುವೆ ಮಾಡಿ ಕೊಟ್ಟಿರಲ್ವಾ? ಅವರ್‍ಯಾಕೆ ಪಾಲು ಕೇಳೋಕೆ ಬರ್ತಾರೆ? ಬಾವ ಪಕ್ಷಪಾತ ಮಾಡಲ್ಲ. ಎಲ್ರನ್ನೂ ಒಳ್ಳೇ ಮನೆ ಹುಡುಕಿ ಸೇರಿಸ್ತಾರೆ. ಇಲ್ಲಿನ ಆಸ್ತಿ ಯಾರಿಗೆ ಬೇಕು?'

'ನಿಂಗೇನು ಭವಿಷ್ಯ ಗೊತ್ತುಂಟಾ?'

'ನಾಕಕ್ಷರ ಕಲಿತ ಕೂಡ್ಲೆ ಭಾರೀ ಬುದ್ಧಿವಂತ ಆಗ್ಬಿಟ್ಯಾ ನೀನು? ಈಗ ನಾನು ಹೋಗಿ ನನ್ನ ತೌರುಮನೇಲಿ ಪಾಲು ಕೇಳ್ತೀನಾ?'

'ಕೇಳಿದ್ರೆ ತಪ್ಪೇನಿಲ್ಲ'

'ಹೋಗೋ, ಅಣ್ಣ, ತಂಗಿ ಅಂತ ವಿಶ್ವಾಸದಿಂದ ಹೊಕ್ಕುಬಳಕೆ ಇಟ್ಗಂಡಿದೀವಿ. ಅದಕ್ಕೂ ಕಡ್ಡಿ ಹೆಟ್ಕೋಕೆ ಬರ್ಬೇಡ...'

ನಾನು ಎಂಜಿನಿಯರಿಂಗೇ ಓದೋದು ಅಂತ ಯಾಕೆ ಹಟ ಹಿಡಿದು ಕೂರಲಿಲ್ಲ? ಸತ್ಯಾಗ್ರಹ ಮಾಡಲಿಲ್ಲ? ಹಿರಿಯಪ್ಪನ ಬಗ್ಗೆ ಒಳಗಿಂದೊಳಗೆ ಅಂಜಿಕೆ ಇತ್ತೇ? ಅವನ ಸರ್ವಾಧಿಕಾರವನ್ನು ಮನೆಯವರೆಲ್ಲಾ ಯಾಕೆ ಒಪ್ಪಿಕೊಂಡು ಅವನ ಆಜ್ಞಾನುವರ್ತಿಗಳಾಗಿಬಿಟ್ಟಿದ್ದೇವೆ? ಒಂದೊಮ್ಮೆ ಅವನ ಮಾತು ಮೀರಿ ತನ್ನ ಆಸೆಯನ್ನು ನೆರವೇರಿಸಿಕೊಳ್ಳಲು ಯತ್ನಿಸಿದರೆ ಮುಂದೆ ಯಾವ್ಯಾವ ಅಡ್ಡಿ ಆತಂಕಗಳು ಎದುರಾಗುತ್ತವೆಯೋ ಬಲ್ಲವರ್‍ಯಾರು? ಅತ್ಯಗತ್ಯ ಖರ್ಚುಗಳಿಗೆ ದುಡ್ಡು ಒದಗಿಸದೆ ಅಸಹಕಾರ ತೋರಿಸಿದರೆ ಸಾಕಲ್ಲ? ಹಿರಿಯಪ್ಪನ ಮಾತು ಮೀರಿ ತನ್ನಿಚ್ಛೆ ಪೂರೈಸಿಕೊಳ್ಳಲು ಪ್ರಯತ್ನಿಸಿದರೆ ಈ